## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಬೆಂಗಳೂರು

ಸಂಖ್ಯೆ: ಎಂಡಿಎಕ್ಸ್(2)/ ೧೧೨/2014-15 ದಿನಾಂಕ:30-05-2014

ರವರಿಗೆ,

ಸಭಾಪತಿಗಳು, ವೈದ್ಯಕೀಯ ಮಂಡಳಿ
ಜಿಲ್ಲಾ ಶಸ್ತ್ರ ಚಿಕಿತ್ಸಕರು/ಅಧೀಕ್ಷಕರು,
ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು.
ಜಿಲ್ಲಾ ಆಸ್ಪತ್ರೆ, ಗುಲ್ಬರ್ಗಾ/ಬೆಳಗಾವಿ.
ಕೆ.ಆರ್.ಆಸ್ಪತ್ರೆ. ಮೈಸೂರು.

ಮಾನ್ಯರೇ,

ವಿಷಯ: ಸರ್ಕಾರಿ ಶಾಲಾ ಶಿಕ್ಷಕರ ವರ್ಗಾವಣೆ ಸಂಭಂದ ವೈದ್ಯಕೀಯ ಆಧಾರದಲ್ಲಿ ಆಧ್ಯತೆ ಮೇಲೆ ವರ್ಗಾವಣೆಗೆ ಪರಿಗಣಿಸ ಬೇಕಾಗಿರುವುದರಿಂದ ಶಿಕ್ಷಕರು ಮತ್ತು ಅವರ (ಪತಿ ಅಥವಾ ಪತ್ನಿ, ಮಕ್ಕಳು) ಅವಲಂಬಿತರ ಪ್ರಕರಣಗಳಿಗೆ ವೈದ್ಯಕೀಯ ಪ್ರಮಾಣ ಪತ್ರಗಳನ್ನು ವಿಭಾಗೀಯ ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ಪ್ರಮಾಣ ಪತ್ರದ ಬಗ್ಗೆ ಸತ್ಯಾಸತ್ಯತೆಯ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ವೈದ್ಯಕೀಯ ಪ್ರಮಾಣ ಪತ್ರ ನೀಡುವ ಕುರಿತು,

ಉಲ್ಲೇಖ: ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ:3(7)ಪ್ರಾಶಿ ವರ್ಗ/01/2013-14, ದಿ: 26/04/2014.

*-*-*

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶಿಕ್ಷಕರ ವರ್ಗಾವಣೆ ನಿಯಮಗಳಲ್ಲಿ ಅತ್ಯಂತ ತೀರ್ವತರಹದ ಖಾಯಿಲೆ (TERMINALLY ILL) ಗಳಿಗೆ (ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂಧಿ ಖಾಯಿಲೆ) ಮತ್ತು ನೌಕರರು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ವೈದ್ಯಕೀಯ ಸೌಲಭ್ಯ ಲಭ್ಯವಿಲ್ಲದಿದ್ದಲ್ಲಿ ಸೌಲಭ್ಯ ದೊರೆಯುವಲ್ಲಿಗೆ ವರ್ಗಾವಣೆಗೆ ಅವಕಾಶ ಕಲ್ಪಿಸಿರುವುದರಿಂದ ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ನೀಡಿದ ವೈದ್ಯಕೀಯ ಪ್ರಮಾಣ ಪತ್ರಗಳ ಸತ್ಯಾಸತ್ಯತೆಯನ್ನು ವಿಭಾಗೀಯ ಮಟ್ಟದಲ್ಲಿ ವೈದ್ಯಕೀಯ ಮಂಡಳಿ ರಚಿಸಿ, ವೈದ್ಯಕೀಯ ಮಂಡಳಿ ವರದಿ ನೀಡಲು ಕೋರಿರುತ್ತಾರೆ. (ಪತ್ರದ ಪ್ರತಿ ಲಗತ್ತಿಸಿದೆ)

ಆದುದರಿಂದ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ನೌಕರರಿಗೆ ದಿನಾಂಕ: 23-06-2014 ರಿಂದ 25-06-2014 ರವರೆಗೆ ಮತ್ತು 28-06-2014 ರಿಂದ 02-07-2014 ರವರೆಗೆ ಈ ಸಿಮಿತ ಅವಧಿಗೆ ಮಾತ್ರ ಆಯಾ ವಿಭಾಗಿಯ ಮಟ್ಟದಲ್ಲಿ ವೈದ್ಯಕೀಯ ಮಂಡಳಿ ರಚಿಸಿ ಉಲ್ಲೇಖ ಪತ್ರದಲ್ಲಿ ಸೂಚಿರುವಂತೆ ವರದಿ ನೀಡಲು ಕೋರಿದೆ.

ತಮ್ಮ ನಂಬುಗೆಯ,

ಆಯುಕ್ತರು,
ಆರೋಗ್ಯ ಮತ್ತು ಕು.ಕ ಸೇವೆಗಳು,
ಬೆಂಗಳೂರು.

ಪ್ರತಿಯನ್ನು:
ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರ ಮಾಹಿತಿಗಾಗಿ